# ಪುಟ್ಟ ಪುಟ್ಟ ಮರಿಗಳು

**■ ಸೋಮಲಿಂಗ ಬೇಡರ, ಆಳೂರ**

ಹೊಂಬಿಸಿಲೊಮ್ಮೆ ಬಿದ್ದಿತ್ತು
ತುಂತುರ ಮಳಿ ಬರ್ತಿತ್ತು
ಪುಟ್ಟದೊಂದು ಮೊಲ
ಬಿಟ್ಟು ಬಂತು ಬಿಲ

ಹೊರಗ ಬಂದು ಅತ್ತಿತ್ತ
ಟುಣುಟುಣು ಜಿಗಿದಾಡ್ತ
ಮೇಯ್ತಿತ್ತದು ಗರಿಕಿ
ಕಂಡಿತ್ತಾಗ ಮರಿಜಿಂಕಿ

ಮೊಲ ಜಿಂಕಿ ಕೂಡ್ಕೊಂಡು
ಹುಲ್ಲಿನ್ಚಿಗುರ ತಿನ್ಕೊಂಡು
ಆಡ್ತಾ ಇದ್ದು ಚಂದ
ಬಂದಿತ್ತಲ್ಲಿಗಿ ಮರಿನಾಗ

ಮೊಲ ಜಿಂಕಿ ಮರಿನಾಗ
ತಮಗ ಸಿಕ್ಕಿದ್ ಪಡ್ಕೊಂಡು
ತಿಂತಾ ಇರಲು ಓಡೋಡಿ
ಬಂದಿತ್ತೊಂದು ಮರಿಹುಲಿ

ಮರಿ ಜಿಂಕಿ ಹುಲಿ ನಾಗ
ಸೇರ್ಕೊಂಡು ಹಿಗ್ಗಿನಿಂದ
ಆಡಿ ಆಡಿ ನಲಿವಾಗ
ದೂರಾಯ್ತು ಮಳಿ ಬಿಸಲ

ಭೇದ ಭಾವ ಇಲ್ವೆಯಿಲ್ಲ
ಪುಟ್ಟ ಪುಟ್ಟ ಮರಿಗಳಲ್ಲಿ
ಕೂಡಿ ಆಡಿ ದಣಿದು ಎಲ್ಲ
ಮರಳಿ ಹೋದ್ವು ಮನಿಗ್ಮೆಲ್ಲ ■



# ಬುಗುರಿ

**■ ಲಲಿತಾ ಕೆ. ಹೊಸಪ್ಯಾಟಿ**

ಕಲೆ: ಸಂತೋಷ್ ಸಸಿಹಿತ್ಲು

ಬುಗುರಿ ಬುಗುರಿ ಬಣ್ಣದ ಬುಗುರಿ
ಬರ ಬರ ತಿರುಗುವ ತೀಡಿದ ಬುಗುರಿ
ಗುಂಡಗೆ ಕೆತ್ತಿದ ಕುಸುರಿ ಬುಗುರಿ
ಇಟ್ಟ ಗುರಿಯಲಿ ನೆಟ್ಟಿದೆ ಬುಗುರಿ

ದರ ದರ ದಾರ ಸುತ್ತಿದ ಬುಗುರಿ
ಚಾಚಿದ ಚುಂಗಲಿ ಒತ್ತಿದ ಬುಗುರಿ
ಕಬ್ಬಿಣ ಮೊಳೆಯ ಸೂತ್ರದ ಬುಗುರಿ
ಭುಮಿಯ ಸುತ್ತ ಸುತ್ತುವ ಬುಗುರಿ

ಮರದ ತುಂಡಿನ ಗಟ್ಟಿ ಬುಗುರಿ
ಪೇಟೆಗೆ ಬಂದಿದೆ ಪ್ಲಾಸ್ಟಿಕ್ ಬುಗುರಿ
ಬುಗುರಿ ಮರದಲಿ ಕಾಯಿ ಬುಗುರಿ
ಕಾಸು ಕೊಟ್ಟರು ಸಿಗದ ಬುಗುರಿ

ಕನ್ನಡ ಹಾಡಲಿ ಮೆರೆದಿದೆ ಬುಗುರಿ
ಎಳೆಯರ ಗೆಳೆಯರ ಸರ್ವರ ಬುಗುರಿ
ಬಾಗದೆ ಬಗ್ಗದೆ ತಿರುಗುವ ಬುಗುರಿ
ಕಂಗಳ ಸೆಳೆದಿದೆ ಕನ್ನಡ ಬುಗುರಿ

ಅಂಗಳ ತುಂಬ ಹರಡಿದೆ ಬುಗುರಿ
ಅಂಗೈಯಲ್ಲಿ ಕುಣಿಯುವ ಬುಗುರಿ
ಪರಿಸರ ಮಿತ್ರ ಮರದ ಬುಗುರಿ
ಭಾರವಿಲ್ಲದ ಹಗುರ ಬುಗುರಿ

ಜಾತ್ರೆಗೆ ಬಂದಿದೆ ತರ ತರ ಬುಗುರಿ
ಅಜ್ಜನ ಕಾಲದ ಮಣ್ಣಿನ ಬುಗುರಿ
ಅಜ್ಜಿಯ ಮೂಗಲಿ ಮುತ್ತಿನ ಬುಗುರಿ
ದುಬಾರಿ ಅಲ್ಲದ ಹಗುರ ಬುಗುರಿ

ಅಣ್ಣನ ಜೇಬಲಿ ಪುಟಾಣಿ ಬುಗುರಿ
ಅಕ್ಕ ತಂಗಿಯರು ಆಡಲಿ ಬುಗುರಿ
ಕಾಮನ ಬಿಲ್ಲಿನ ಬಣ್ಣದ ಬುಗುರಿ
ಎಲ್ಲಿ ಹೋಯಿತು ಮಕ್ಕಳ ಬುಗುರಿ ■



## ಕುಂಚ ಪ್ರಪಂಚ



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in

**ರಿತಮ್ ಆರ್ ಕಾಮತ್**
1ನೇ ತರಗತಿ, ಶ್ರೀ ಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆ
ರಿಪ್ಪನ್‌ಪೇಟೆ, ಹೊಸನಗರ